# ಅಂದೇ ನಿರ್ಣಯಿಸಿದರು ಕಾಣೋ

1. **Ref.:** Shri Purandara Dasara Sahitya Part – 3, Mahatmya Gnyana, edited by Shri Betageri Krishna Sharma and Shri Bengeri Huchha Rayaru, page No. 142.
2. **Ref.:** Samagra Dasa Sahitya, Samputa 3.2 published by Kannada & Culture Dept, Govt of Karnataka, Bengaluru, page No. 52.
3. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao, page No. 212.
4. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 16.
5. **Note:** Lyrics given without highlights are as per Ref. 1. The wordings in Ref. 2 are same as in Ref. 1. The wordings in Ref. 3 are slightly different and are given separately in yellow highlights. The wordings in Ref. 4 are almost same as in Ref. 3.
6. **Note:** No. of stanzas in Ref. 1 & 2 are 5 and no. of stanzas in Ref. 3 & 4 are 4. Also, ankitas are different in these books. We have considered Ref. 1 as std and taken that Ankita for listing.

ರಾಗ: ಪಂತುವರಾಳಿ ತಾಳ: ಅಟ

ಅಂದೆ ನಿರ್ಣ ಯಿಸಿದರು ಕಾಣೋ
ಇಂದಿರಾಪತಿ ಪರದೈವತವೆಂಬುದ ॥ ಪ ॥

ಅಂದು ಚತುರ್ಮುಖ ನಾರದನಿಗೆ ತನ್ನ
ತಂದೆ ಶ್ರೀಹರಿ ಪರದೈವವೆಂದು
ಸಂದೇಹಗಳ ಪರಿಹರಿಸಿಹ ದ್ವಿತೀಯದ
ಸ್ಕಂಧದೊಳಯ್ದನೆಯ ಅಧ್ಯಾಯದಲಿ ॥ ೧ ॥

ಅಂದು ಕಪಿಲದೇವ ದೇವಹೂತಿಗೆ ತಾನು
ಚೆಂದದ ತತ್ತ್ವವನೆಲ್ಲ ಬೋಧಿಸಿದ

ಅಂದದಲರ್ಜುನ – ಉದ್ಧವರಿಗೆ ಅಂದಾ –
ನಂದದಿ ಗೀತಾಶಾಸ್ತ್ರವನೊರೆದನೆಂದು   ॥ ೨ ॥

'ವೇದೈಶ್ಚ ಸರ್ವೈರಹಮೇವ ವೇದ್ಯಃ'
'ವೇದವಿಧಾಯಕ' ನಾಮದವನು
ವೇದಾಕ್ಷರಗಳು ಹರಿನಾಮಗಳೆಂದು
ವೇದಾಂತ ಸಿದ್ಧಾಂತಗಳಲಿ ಪೇಳಿದರೆಂದು   ॥ ೩ ॥

ರಾಜಸ – ತಾಮಸ ಪೌರಾಣಗಳಿವು
ರಾಜಸ – ತಾಮಸ ಜೀವರಿಗೆ
ರಾಜಸ – ತಾಮಸ ಗತಿಗೋಸ್ಕರ ಮುನಿ –
ರಾಜ ವ್ಯಾಸನು ಮೋಹಕವೆಂದು ಪೇಳಿದ   ॥ ೪ ॥

ಬಿಡು ಪಾಷಂಡಮತದ ದುರ್ಬುದ್ಧಿಯ
ಬಿಡದೆ ಮಾಡು ವೈಷ್ಣವಸಂಗವ
ಧೃಡಭಕ್ತಿಯಿಂದ ಶ್ರೀಹರಿಯ ಪೂಜಿಸಿದರೆ
ಮೃಡಪ್ರಿಯ ಪುರಂದರ ವಿಠಲನೊಲಿವನೆಂದು   ॥ ೫ ॥

**Note:** The lyrics given below are as per Ref. 3 and Ref. 4.

ರಾಗ: ಆರಭಿ   ತಾಳ: ಆದಿ

ಅಂದೇ ನಿರ್ಣಯಿಸಿದರು ಕಾಣೋ
ಇಂದಿರಾಪತಿ ಪರದೈವವೆಂದು   || ಪ ||

ಅಂದು ಚತುರ್ಮುಖ ನಾರದನಿಗೆ ತಮ್ಮ
ತಂದೆ ಶ್ರೀಹರಿ ಪರದೈವವೆಂದು
ಸಂದೇಹವ ಪರಿಹರಿಸಿದ ದ್ವಿತೀಯ
ಸ್ಕಂಧದೊಳೈದನೆಯ ಅಧ್ಯಾಯದಲಿ   || 1 ||

ವೇದೋಪಾಸ್ಯಕ ವೇದವಿಧಾಯಕ
ವೇದಾತೀತಾ ವಿಧಾತನಂತೆ

ವೇದಾಕ್ಷರಗಳು ಹರಿನಾಮಗಳೆಂದು
ವೇದಾಂತ ಶ್ರುತಿ ಸ್ಮೃತಿ ಶಾಸ್ತ್ರಗಳಿಂದ || 2 ||

ಅಂದು ಕಪಿಲದೇವ ದೇವಹೂತಿಗೆ ತಾನು
ಚೆಂದದ ತತ್ತ್ವವನೆಲ್ಲ ಬೋಧಿಸಿದ
ಅಂದದಲರ್ಜುನ ಉದ್ಧವರಿಗೆ ಅಂದಾ
ನಂದದಿ ಗೀತಾ ಶಾಸ್ತ್ರವನೊರೆದನೆಂದು || 3 ||

ಬಿಡು ಪಾಷಂಡ ಮತದ ದುರ್ಬುದ್ಧಿಯ
ಬಿಡದೆ ಮಾಡು ಸಜ್ಜನರ ಸಂಗವನು
ಧೃಡ ಭಕುತಿಯಲಿ ಹರಿಯ ಸೇವಿಸಲು
ಮೃಡಪ್ರಿಯ ಪುರಂದರ ವಿಠಲನೊಲಿವನೆಂದು || 4 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಪೌರಾಣಿಕ ಸಂದರ್ಭಗಳ ಆಧಾರದಿಂದ ಶ್ರೀಹರಿಯ ಸರ್ವೋತ್ತಮತ್ವವನ್ನು ದಾಸರು ಇಲ್ಲಿ ಸಿದ್ಧಗೊಳಿಸಿದ್ದಾರೆ.

೧. **ಭಾಗವತ ೫ನೆಯ ಸ್ಕಂಧ ೫ನೆಯ ಅಧ್ಯಾಯ ೯-೪೨ ಶ್ಲೋಕಗಳು.**

೨. **ಕಪಿಲದೇವ: —** ಕರ್ದಮಮುನಿ ಮತ್ತು ಸ್ವಾಯಂಭುವ ಮನುವಿನ ಮಗಳಾದ ದೇವಹೂತಿಯ ಮಗ. ಇವನು ವಿಷ್ಣುವಿನ ಅವತಾರವೆಂದು ಭಾರತದಲ್ಲಿ ವರ್ಣನೆ ಇದೆ. (ಭಾರತ. ವನ. ೧೦೬-೧೦೭). ಇವನು ಸಾಂಖ್ಯಸೂತ್ರಗಳನ್ನು ಬರೆದನು.

**ದೇವಹೂತಿ** = ಕಪಿಲದೇವನ ತಾಯಿ. (ಭಾಗ. ३-೨४).

**ಅರ್ಜುನ ಉದ್ಧವರಿಗೆ: —** ಅರ್ಜುನನಿಗೆ ಕೃಷ್ಣನು ಭಗವದ್ಗೀತೆಯನ್ನೂ ಉದ್ಧವನಿಗೆ ಉದ್ಧವಗೀತೆಯನ್ನೂ ಹೇಳಿದ ವಿಷಯ ಕ್ರಮವಾಗಿ ಭಾರತ ಮತ್ತು ಭಾಗವತಗಳಲ್ಲಿ ಬರುತ್ತದೆ. (ಭಾರತ. ಭೀಷ್ಮ ಮತ್ತು ಭಾಗ ३-३).

೩. **ವೇದೈಶ್ಚ.... ವೇದ್ಯಃ** (ಭ. ಗೀ. ೧೫-೧೫).

**ವೇದಾಂತ** = ಉಪನಿಷತ್ತುಗಳು.

**ವೇದವಿಧಾಯಕ** = ವೇದಗಳನ್ನು ರಚಿಸಿದವ.

**ವೇದಾಕ್ಷರಗಳು ಹರಿನಾಮಗಳೆಂದು :**

ವೇದಾಕ್ಷರಾಣಿಸಂತಿಯಾವಂತಿವೇದೇ |

ದ್ವಿಜಾದಿಭಿಃ ಪಠಿತಾನೀ ತಾನಿಸರ್ವೈವ ||

ತಾವಂತಿ ಸರ್ವಾಣಿ ಹರಿಪ್ರಿಯಾಣಿ |

ತಾನ್ಯೇವನಾಮಾನಿ ಹರೇಶ್ಚನಿತ್ಯಂ ||

(ಬ್ರಹ್ಮಕಾಂಡ ಗರುಡ ಪು. ಅ. ೨ ಶ್ಲೋ. ೫೭).

೪. **ರಾಜಸ ತಾಮಸ ಪುರಾಣ : —** ಪುರಾಣಗಳಲ್ಲಿ ಸಾತ್ವಿಕ, ರಾಜಸ, ತಾಮಸವೆಂಬ ಮೂರು ಬಗೆಗಳಿವೆ. ವಿಷ್ಣು ಸರ್ವೋತ್ತಮತ್ವವನ್ನು ಪ್ರತಿಪಾದಿಸುವ ಪುರಾಣಗಳು ಸಾತ್ವಿಕ ಪುರಾಣಗಳೆಂದು ಪರಂಪರೆ ಇದೆ.

**ಮೋಹಕ** = ಭ್ರಾಂತಿ.

**ವ್ಯಾಸ** = ವ್ಯಾಸರು ವಿಷ್ಣುವಿನ ಅಂಶರೂಪದಿಂದ ಅವತಾರ ತಾಳಿದವರೆಂದು ಉಲ್ಲೇಖವಿದೆ. (ಮತ್ಸ್ಯ ೫೨/೩-೧೧).

ಇವರು ವೇದಗಳನ್ನು ವ್ಯವಸ್ಥಿತ ರೂಪದಲ್ಲಿ ವಿಭಾಗಿಸಿದುದರಿಂದ ಇವರಿಗೆ ವೇದವ್ಯಾಸರೆಂಬ ಹೆಸರಿದೆ. ಇವರ ತಂದೆ ಪರಾಶರ ಮುನಿ. ತಾಯಿ ಸತ್ಯವತಿ. ಇವರು ಮಹಾಭಾರತ, ಭಾಗವತ, ಹರಿವಂಶ ಪುರಾಣಗಳ ಕರ್ತರು. ಇವಲ್ಲದೆ ಹದಿನೆಂಟು ಪುರಾಣಗಳನ್ನೂ ಇವರೇ ಬರೆದವರೆಂದು ಪರಂಪರೆ ಹೇಳುತ್ತದೆ.

೫. **ಪಾಷಂಡ ಮತ** = ನಾಸ್ತಿಕ ಮತ.

**ಮೃಡಪ್ರಿಯ** = ಶ್ರೀಹರಿ.

**Classification:** Keerthane
**Ankita:** purandara vittala
**Location:** NA
**Category:** Mahatmya Gnana, Hari Sarvottama
**Sub-Category:** hari sarvottama, Vishnu, brahma, narada, Krishna, anumana, deva, Kapila, tatva, vedavyasa, veda, muni, buddi, puje,
**Pravachana:** NA
**Explanation:** NA